ಶ್ರೀ ಎಂ.ವಿ. ವೆಂಕಟಪ್ಪ : ಮುಳುಬಾಗಿಲಿನಲ್ಲಿ ಅರ್ಜಿಗಳನ್ನು ಕರೆದು ಎರಡು ವರ್ಷ ಆಯಿತು. ಜನರಿಗೆ ನಂಬಿಕೆ ಹೊರಟು ಹೋಗಿದೆ. ಹೌಸಿಂಗ್ ಬೋರ್ಡಿನವರು ಮನೆ ಕಟ್ಟುತ್ತಾರೆ ಎನ್ನುವ ನಂಬಿಕೆ ಇಲ್ಲ. ಅವರ ಹಣವನ್ನು ಬೋರ್ಡಿನಲ್ಲಿ ತುಂಬಿಸಿಕೊಂಡು ನಿಧಾನ ಮಾಡುತ್ತಾ ಇರುವುದು ನ್ಯಾಯವೇ? ಇದನ್ನು ನಿರ್ದಿಷ್ಟ ಕಾಲದಲ್ಲಿ ಮುಗಿಸಿ ಕೊಡುತ್ತೀರಾ?

ಶ್ರೀ ಗೋಪೀನಾಥ್ ಆರ್ ಸಾಂಡ್ರಾ : ಎರಡು ವರ್ಷಗಳ ಹಿಂದೆ ಮುಳುಬಾಗಿಲಿನಲ್ಲಿ ಡಿಮ್ಯಾಂಡ್ ಸರ್ವೇ ಮಾಡಬೇಕು ಎಂದು ಹೇಳಿ ನಾವು ನೋಟಿಫಿಕೇಷನ್ ಹೊರಡಿಸಿದಾಗ 97 ಅರ್ಜಿಗಳು ಮಾತ್ರ ಬಂದವು. ನಾವು ಅಲ್ಲಿ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವಂತಹ ಸದಿಚ್ಛೆಯಿಂದ 87 ಎಕರೆ 10 ಗುಂಟೆ ಜಮೀನನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೇವೆ. 97 ಅರ್ಜಿಗಳು ಇರುವುದರಿಂದ ನಾವು ಏನು ಮಾಡಬೇಕು ಎಂದು ವಿಚಾರ ಮಾಡುತ್ತಿದ್ದೇವೆ. ಆದರೂ ಕೂಡ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಕೊಡುತ್ತೇನೆ. ಇಷ್ಟು ಮನೆಗಳನ್ನು ಕಟ್ಟಿಕೊಡುತ್ತೇವೆ. ಇನ್ನೊಮ್ಮೆ ಸರ್ವೇ ಮಾಡಿ ಇದಕ್ಕೆ ಎಷ್ಟು ಬೇಕೋ ಅಷ್ಟು ಸ್ಥಳವನ್ನು ಅಕ್ವೈರ್ ಮಾಡಿಕೊಂಡು ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಈಗಾಗಲೇ ಹೌಸಿಂಗ್ ಬೋರ್ಡ್‌ವರು ಮನೆಗಳನ್ನು ಕಟ್ಟುತ್ತಾರೆ ಎಂದು ತಿಳಿದು ಆ ಜಮೀನಿನವರು ಸ್ವತಃ ಸೈಟುಗಳನ್ನು ಮಾಡಿ ಮಾರುತ್ತಿದ್ದಾರೆ. ಅವರು ಒಂದು ಸಲ ಸೈಟ್ಗಳನ್ನು ಮಾಡಿ ಬೇರೆಯವರು ಕೊಂಡು ಕೊಂಡರೆ ಫರ್ದರ್ ಕಾಂಪ್ಲಿಕೇಷನ್ಸ್ ಆಮೇಲೆ ಕೋರ್ಟ್ ವ್ಯವಹಾರಕ್ಕೆ ಹೊರಟು ಹೋಗುತ್ತಾರೆ. ಅದಕ್ಕೋಸ್ಕರವಾಗಿ ಆದಷ್ಟು ಬೇಗನೆ ಮಾಡುತ್ತೀರಾ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಎಲ್ಲಿಯವರೆಗೆ ಸಾಕಷ್ಟು ಅರ್ಜಿಗಳು ಬರುವುದಿಲ್ಲ ಅಲ್ಲಿಯವರೆಗೆ ಏನೂ ಆಶ್ವಾಸನೆ ಕೊಡುವುದಕ್ಕೆ ಸಾಧ್ಯವಿಲ್ಲ. ನೀವು ಅರ್ಜಿಗಳನ್ನು ಕೊಡಿಸಿ. ನಿಮಗೆ ಎಷ್ಟು ಭೂಮಿ ಬೇಕೋ ಅಷ್ಟು ಅಕ್ವೈರ್ ಮಾಡಿಸಿ ಅಲ್ಲಿ ಮನೆ ಕಟ್ಟಿಸಿಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

ಅಂಗನವಾಡಿ ಕಾರ್ಯಕ್ರಮ ಕುರಿತು

476 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಗೊಳಿಸಲು ಯೋಜಿಸಲಾಗಿದೆ.

ಆ) ಯಾವ ತಾಲ್ಲೂಕುಗಳಲ್ಲಿ ಸದರಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದು.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು)

ಅ) ಪ್ರಸಕ್ತ ವಾರ್ಷಿಕ ಸಾಲಿನಲ್ಲಿ 18 ತಾಲ್ಲೂಕುಗಳಲ್ಲಿ ಅಂಗನವಾಡಿ ಕಾರ್ಯಕ್ರಮವನ್ನು ಜಾರಿಗೊಳಿಸಲು ಯೋಜಿಸಲಾಗಿದೆ.

	ತಾಲ್ಲೂಕು	ಜಿಲ್ಲೆ
1.	ಗಂಗಾವತಿ	ರಾಯಚೂರು
2.	ಕೊಪ್ಪಳ	
3.	ಬ್ಯಾಡಗಿ	
4.	ಹಾವೇರಿ	
5.	ನರಗುಂದ	ಧಾರವಾಡ

6.	ನವಲಗುಂದ	
7	ಕುಂದಗೋಳ	
8.	ಬಸವನಬಾಗೇವಾಡಿ	ಬಿಜಾಪುರ
9.	ಬಾಗಲಕೋಟೆ	
10.	ಮಾಗಡಿ	ಬೆಂಗಳೂರು (ಗ್ರಾ)
11.	ಚನ್ನಪಟ್ಟಣ	
12.	ತೀರ್ಥಹಳ್ಳಿ	ಶಿವಮೊಗ್ಗ
13.	ಅರಸೀಕೆರೆ	ಹಾಸನ
14.	ಅರಕಲಗೂಡು	
15.	ಮಂಗಳೂರು	ದಕ್ಷಿಣ ಕನ್ನಡ
16.	ಚಿಕೋಡಿ	ಬೆಳಗಾಂ
17.	ಪಿರಿಯಾಪಟ್ಟಣ	ಮೈಸೂರು
18.	ಗುಬ್ಬಿ	ತುಮಕೂರು

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೆ, ನನಗೆ ಒದಗಿಸಿದಂತೆ ಉತ್ತರದಲ್ಲಿ ಅಂಗನವಾಡಿ ಕಾರ್ಯಕ್ರಮವನ್ನು ಸುಮಾರು 10ಜಿಲ್ಲೆಗಳ 18ತಾಲ್ಲೂಕುಗಳಲ್ಲಿ ಜಾರಿ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ನಾನು ನನ್ನ ಮತ ಕ್ಷೇತ್ರವಾದ ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಬಹಳಷ್ಟು ಸಲ ಬರೆದು ತಿಳಿಸಿದ್ದೆ. ನಾನು ಧರ್ಮಸಿಂಗ್ ಜಿ ಅವರಿಗೆ ಪತ್ರ ಬರೆದು ಕೊಟ್ಟಿದ್ದೇನೆ. ನಾನು ಪ್ರಶ್ನೆ ಕೇಳಿದ ಉದ್ದೇಶ ಏನು ಅಂದರೆ ಬಹುಶಃ ಹೊನ್ನಾವರರ ತಾಲ್ಲೂಕಿನದ್ದು ಸಹ ಇದರಲ್ಲಿ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಧರ್ಮಸಿಂಗ್ ಜಿ ಅವರಿಗೆ ನನ್ನ ಮೇಲೆ ಬಹಳ ಪ್ರೀತಿ. ಇದನ್ನು ಸೇರಿಸಿಕೊಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಆದರೆ ಅವರು ಇದರಲ್ಲಿ ಹೊನ್ನಾವರವನ್ನು ಸೇರಿಸಿಲ್ಲ. ಹೊನ್ನಾವರವನ್ನು ಏಕೆ ಸೇರಿಸಿಲ್ಲ, ಇದು ಒಂದು. ಎರಡನೆಯದು ಇಲ್ಲಿ ಉತ್ತರದಲ್ಲಿ ತೋರುತ್ತದೆ. ಧಾರವಾಡ ಒಂದು ಜಿಲ್ಲೆಗೆ ಸುಮಾರರು 4 ಕಡೆ, ವಿಜಾಪುರದಲ್ಲಿ ಸುಮಾರು ಮೂರು ಕಡೆಗೆ, ಮತ್ತು ಹಾಸನಕ್ಕೆ ಎರಡು ಕಡೆಗೆ ಹೀಗೆ ಕೊಟ್ಟಿದ್ದಾರೆ. ಆದರೆ ಕೆಲವು ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಬಿಟ್ಟೇ ಬಿಟ್ಟಿದ್ದಾರೆ. ಬೇರೆ ಬೇರೆ ಜಿಲ್ಲೆಗಳಿಗೆ ಈ ತಾರತಮ್ಯ ಏಕೆ ತಂದಿದ್ದಾರೆಂಬುದನ್ನು ಅವರು ತಿಳಿಸಬೇಕು.

10.40 ಎಂ.ಎಂ

ಮತ್ತು ಹೊನ್ನಾವರವನ್ನೂ ಸಹ ಇದೇ ಪಟ್ಟಿಯಲ್ಲಿ ಸೇರಿಸಿಕೊಂಡು ಅಂಗನವಾಡಿ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ ಮಾನ್ಯಮಂತ್ರಿಗಳು ಮನಸ್ಸು ಮಾಡುತ್ತಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಐ.ಸಿ.ಡಿ.ಎಸ್ (ಇಂಟಗ್ರೇಟೆಡ್ ಚೈಲ್ಡ್ ಡೆವಲಪ್ ಮೆಂಟ್ ಸ್ಕೀಮ್) ಪ್ರಾಜೆಕ್ಟ್‌ನಲ್ಲಿ ಸೇರಿಸಿಲ್ಲವೆಂದು ಮಾನ್ಯ ಸದಸ್ಯರಾದ ನಾಯಕ್ ರವರು ನೊಂದ ಮನಸ್ಸಿನಿಂದ ಹೇಳಿದ್ದಾರೆ. ಇತ್ತೀಚೆಗೆ ಭಾರತ ಸರ್ಕಾರದವರು ಕರ್ನಾಟಕ ರಾಜ್ಯದ 175ತಾಲ್ಲೂಕುಗಳಲ್ಲಿ 18 ಪ್ರಾಜೆಕ್ಟ್ ಗಳನ್ನು ಮಂಜೂರು ಮಾಡಿದ್ದಾರೆ, ಉತ್ತರ ಕನ್ನಡ ಜಿಲ್ಲೆಯ ತಾಲ್ಲೂಕುಗಳನ್ನೂ ಸೇರಿಸಿ 166 ಆಗಿದೆ. ಈ ಯೋಜನೆಗೆ ಹಣ ಮಂಜೂರು

ಮಾಡುವವರು ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಇದಕ್ಕೆ ಹಣ ಕೊಡುವುದಿಲ್ಲ. ಐ.ಸಿ.ಡಿ.ಎಸ್. ಪ್ರಾಜೆಕ್ಟ್ ಅನ್ನು ಮಂಜೂರು ಮಾಡಬೇಕಾದರೆ ಕೇಂದ್ರ ಸರ್ಕಾರದ ನಾರ್ಮ್ಸ್ ಪ್ರಕಾರ ಶೇಕಡಾ 30 ರಷ್ಟು ಪರಿಶಿಷ್ಟ ಜಾತಿಃ ವರ್ಗಗಳ ಜನಸಂಖ್ಯೆ ಇರಬೇಕು. ನಿಮ್ಮ ತಾಲ್ಲೂಕಿನಲ್ಲಿ ಶೇಕಡಾ 10ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದ್ದರೂ ಕೂಡ, ನಿಮ್ಮ ತಾಲ್ಲೂಕು ಪಶ್ಚಿಮ ಘಟ್ಟಕ್ಕೆ ಸೇರಿರುವ ಕಾರಣ, ಇಲ್ಲಿಗೆ ಐಸಿಡಿಸ್ ಪ್ರಾಜೆಕ್ಟ್ ಮಂಜೂರು ಮಾಡಬೇಕೆಂದು ನಾವು ಮತ್ತೊಂದು ಪತ್ರ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಬಸವರಾಜೇಶ್ವರಿಯವರು ಮೊನ್ನೆ ರಾಜ್ಯಕ್ಕೆ ಬೇಟಿಯಿತ್ತಾಗ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ನಿನ್ನೆ ಅವರನ್ನು ಕಂಡು ಮಾತನಾಡಿದ್ದಾರೆ, ನಾನೂ ಕೂಡ ಮಾತನಾಡಿದ್ದೇನೆ. ಇನ್ನೂ 9ಐಸಿಡಿಎಸ್ ಪ್ರಾಜೆಕ್ಟ್‌ಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಬೇಕಾಗಿದೆ, ಅವು ಮಂಜೂರು ಆಗುತ್ತದೆ. ತಮ್ಮ ತಾಲ್ಲೂಕು ಪಶ್ಚಿಮಘಟಕ್ಕೆ ಸೇರಿದ್ದು, ಅಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಜನಸಂಖ್ಯೆ ಶೇಕಡಾ 10 ರಷ್ಟಿದ್ದರೂ ಅಲ್ಲಿಗೆ ಪ್ರಾಜೆಕ್ಟ್ ಅನ್ನು ಮಂಜೂರು ಮಾಡಿಕೊಡಲೇ ಬೇಕೆಂದು ಪ್ರಸ್ತಾವನೆ ಕಳುಹಿಸಿದ್ದೇವೆ. ಇನ್ನು 9 ಸಿಡಿಎಸ್ ಪ್ರಾಜೆಕ್ಟ್‌ಗಳು ಮಂಜೂರಾಗ ಬೇಕಾಗಿರುವುದರಿಂದ, ಅಧ್ಯಕ್ಷರ ಮೂಲಕ ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತಿದ್ದೇನೆ, ಸದರಿ ವರ್ಷದಲ್ಲಿಯೇ ಈ ಪ್ರಾಜೆಕ್ಟ್ ಗಳನ್ನು ಮಂಜೂರು ಮಾಡಿಸಿಕೊಡುತ್ತೇನೆ. ಮತ್ತು ಕೇಂದ್ರ ಸರ್ಕಾರದಲ್ಲಿರುವ ಒಪ್ಪಿಗೆ ಕೊಟ್ಟಿದ್ದಾರೆ. ಆದುದರಿಂದ, ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರುತ್ತೇವೆ.

ಶ್ರೀ ಮನೋಹರ ಐನಾಪುರಃ : ಇನ್ನೂ 9 ಐಸಿಡಿಎಸ್ ಪ್ರಾಜೆಕ್ಟ್‌ಗಳು ಮಂಜೂರಾಗಬೇಕಾಗಿದೆಯೆಂದು ಈಗತಾನೇ ಮಾನ್ಯ ಸಚಿವರು ಹೇಳಿದರು. ಯಾವ್ಯಾವ ತಾಲ್ಲೂಕುಗಳಲ್ಲಿ ಈ 9 ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್ : 1993-94ನೇ ಸಾಲಿನಲ್ಲಿ 18 ಐಸಿಡಿಎಸ್ ಪ್ರಾಜೆಕ್ಟ್‌ಗಳು ಕ್ಲಿಯರ್ ಆಗಿದ್ದು, ಇನ್ನೂ 9 ಪ್ರಾಜೆಕ್ಟ್‌ಗಳು ಮಂಜೂರಾಗಬೇಕಿರುವುದರಿಂದ ಉತ್ತರ ಕನ್ನಡ ಜಿಲ್ಲೆಯು ಸೇರಿದಂತೆ ಇತರ ಜಿಲ್ಲೆಗಳನ್ನು ಸೇರಿಸಿಕೊಂಡಿದ್ದು, ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೇವೆ. ಆ ಪ್ರಸ್ತಾವನೆ ಮಂಜೂರಾಗುತ್ತದೆ.

ರಾಜ್ಯದಲ್ಲಿರುವ ಉದ್ಯೋಗವಿನಿಮಯ ಕೇಂದ್ರಗಳ ಸಂಖ್ಯೆ.

205 ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ), ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ ಅವು ಎಲ್ಲೆಲ್ಲಿ ಇರುತ್ತವೆ (ವಿವರ ನೀಡುವುದು)

ಆ) 1993ನೇ ಮಾರ್ಚ್ ಅಖೈರವರೆಗೆ ದಕ್ಷಿಣ ಕನ್ನಡದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಎಷ್ಟು (1988 ರಿಂದ ವರ್ಷವಾರು ವಿವರ ನೀಡುವುದು).

ಇ) ದಕ್ಷಿಣ ಕನ್ನಡದ ಉದ್ಯೋಗ ವಿನಿಮಯ ಕೇಂದ್ರದಿಂದ ಸಂದರ್ಶನಗಳಿಗೆ ಕಳುಹಿಸುವಾಗ ಅನುಸರಿಸುವ ನೀತಿ ನಿಯಮಗಳೇನು

ಈ) ಇಲ್ಲಿ ನಾಲ್ಕೈದು ವರ್ಷಗಳಾದರೂ ನೋಂದಾವಣೆ ಹೊಂದಿದ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಅವಕಾಶ ಸಿಕ್ಕದಿರಲು ಕಾರಣವೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾರ್ಮಿಕ ಸಚಿವರು)